## ಸರ್ಕಾರಿ ಪ್ರೌಢಶಾಲೆ ಬಪ್ಪಂಜಿ. ಕೊಪ್ಪ ತಾ.

## ಹತ್ತನೆಯ ತರಗತಿ–ಅಲಂಕಾರಗಳು

### 1. ಹಸುಳೆಯಂದದಿ ಒಲಿದಳು – ಉಪಮಾಲಂಕಾರ(ಲುಪ್ತೋಪಮಾಲಂಕಾರ)

೧. ಉಪಮೇಯ : ಸ್ಪಷ್ಟವಾಗಿಲ್ಲ (ಶಬರಿ)

೨. ಉಪಮಾನ : ಹಸುಳೆ

೩. ಉಪಮವಾಚಕ : ಅಂದದಿ

೪. ಸಮಾನಧರ್ಮ : ಒಲಿಯುವುದು

**ಸಮನ್ವಯ** : ಇಲ್ಲಿ ಉಪಮೇಯವಾದ ಶಬರಿಯನ್ನು ಉಪಮಾನವಾದ ಹಸುಳೆಗೆ ಹೋಲಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.

**ಲಕ್ಷಣ** : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

### 2. ಬಳಾರಿಯ ಮನೆಯಂ ಪರಕೆಯ ಕುರಿ ಪುಗಿಸುವಂತೆ – ಉಪಮಾಲಂಕಾರ (ಲುಪ್ತೋಪಮಾಲಂಕಾರ)

೧. ಉಪಮೇಯ : ಸ್ಪಷ್ಟವಾಗಿಲ್ಲ (ದುಷ್ಟಬುದ್ಧಿಯ ತಂದೆ ಪ್ರೇಮಮತಿ)

೨. ಉಪಮಾನ : ಬಳಾರಿಯ ಮನೆಗೆ ಕೊಂಡೊಯ್ಯುವ ಹರಕೆಯ ಕುರಿ

೩. ಉಪಮವಾಚಕ : ಅಂತೆ

೪. ಸಮಾನಧರ್ಮ : ಪುಗಿಸುವುದು

**ಸಮನ್ವಯ** : ಇಲ್ಲಿ ಉಪಮೇಯವಾದ ದುಷ್ಟಬುದ್ಧಿಯ ತಂದೆಯನ್ನು ಉಪಮಾನವಾದ ಹರಕೆಯ ಕುರಿಗೆ ಹೋಲಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.

**ಲಕ್ಷಣ** : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

### 3. ಒಳಗಿನ ಮಂದಿ ಗುಂಡು ಹೊಡೆದರೊ ಮುಂಗಾರಿ ಸಿಡಿಲ ಸಿಡಿದ್ಹಂಗ – ಉಪಮಾಲಂಕಾರ

೧. ಉಪಮೇಯ : ಒಳಗಿನ ಮಂದಿ ಗುಂಡು ಹೊಡೆಯುವುದು

೨. ಉಪಮಾನ : ಮುಂಗಾರಿನಲ್ಲಿ ಸಿಡಿಲು ಸಿಡಿಯುವುದು.

೩. ಉಪಮವಾಚಕ : ಹಾಂಗ

೪. ಸಮಾನಧರ್ಮ : ಹೊಡೆಯುವುದು

**ಸಮನ್ವಯ** : ಇಲ್ಲಿ ಉಪಮೇಯವಾದ ಒಳಗಿನ ಮಂದಿ ಗುಂಡು ಹೊಡೆಯುವುದನ್ನು ಉಪಮಾನವಾದ ಮುಂಗಾರಿನಲ್ಲಿ ಸಿಡಿಯುವ ಸಿಡಿಲಿಗೆ ಹೋಲಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.

**ಲಕ್ಷಣ** : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

### 4. ಸಿಡಿಲ ಸಿಡಿದ್ಹಾಂಗ ಗುಂಡು ಸುರಿದಾವ. – ಉಪಮಾಲಂಕಾರ

**೧.** ಉಪಮೇಯ :ಗುಂಡು ಸುರಿಯುವುದು

೨. ಉಪಮಾನ : ಸಿಡಿಲು ಸಿಡಿಯುವುದು

೩. ಉಪಮವಾಚಕ : ಹಾಂಗ

೪. ಸಮಾನಧರ್ಮ : ಸುರಿಯುವುದು/ಸಿಡಿಯುವುದು

**ಸಮನ್ವಯ** : ಇಲ್ಲಿ ಉಪಮೇಯವಾದ ಗುಂಡು ಸುರಿಯುವುದನ್ನು ಉಪಮಾನವಾದ ಸಿಡಿಲು ಸಿಡಿಯುವುದಕ್ಕೆ ಹೋಲಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.

**ಲಕ್ಷಣ** : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

## 5. ಶೋಕದುಲ್ಕೆ .– ರೂಪಕಾಲಂಕಾರ

೧. ಉಪಮೇಯ : ಶೋಕ

೨. ಉಪಮಾನ : ಉಲ್ಕೆ

**ಸಮನ್ವಯ** : ಇಲ್ಲಿ ಉಪಮೇಯವಾದ ಶ್ರೀರಾಮನ ಶೋಕವನ್ನು ಉಪಮಾನವಾದ ಉಲ್ಕೆಗೆ ಅಭೇದವಾಗಿ ರೂಪಿಸಿರುವುದರಿಂದ ಇದು ರೂಪಕಾಲಂಕಾರವಾಗಿದೆ.

**ಲಕ್ಷಣ** : ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರೆಡೂ ಒಂದೇ ಎಂದು ವರ್ಣಿಸಿದರೆ ಅದೇ ರೂಪಕಾಲಂಕಾರ.

## 6. ಆತ್ಮ ಸುರಭಿ .– ರೂಪಕಾಲಂಕಾರ

೧. ಉಪಮೇಯ : ಆತ್ಮ

೨. ಉಪಮಾನ : ಸುರಭಿ

**ಸಮನ್ವಯ** : ಇಲ್ಲಿ ಉಪಮೇಯವಾದ ಆತ್ಮವನ್ನು ಉಪಮಾನವಾದ ಸುರಭಿಗೆ ಅಭೇದವಾಗಿ ರೂಪಿಸಿರುವುದರಿಂದ ಇದು ರೂಪಕಾಲಂಕಾರವಾಗಿದೆ.

**ಲಕ್ಷಣ** : ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರೆಡೂ ಒಂದೇ ಎಂದು ವರ್ಣಿಸಿದರೆ ಅದೇ ರೂಪಕಾಲಂಕಾರ.

## 7. ಮಾರಿಗೌತಣವಾಯ್ತು ನಾಳಿನ ಭಾರತವು. – ರೂಪಕಾಲಂಕಾರ

೧. ಉಪಮೇಯ : ನಾಳಿನ ಭಾರತ ಯುದ್ಧ

೨. ಉಪಮಾನ : ಮಾರಿಯ ಔತಣ

**ಸಮನ್ವಯ** : ಇಲ್ಲಿ ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇದವಾಗಿ ರೂಪಿಸಿರುವುದರಿಂದ ಇದು ರೂಪಕಾಲಂಕಾರವಾಗಿದೆ.

**ಲಕ್ಷಣ** : ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರೆಡೂ ಒಂದೇ ಎಂದು ವರ್ಣಿಸಿದರೆ ಅದೇ ರೂಪಕಾಲಂಕಾರ.

## 8. ಬೆಕ್ಕಿನಂತೆ ದೇಹವನ್ನು ಹುದುಗಿಸಿಕೊಂಡು ಹುಲಿ. – ಉಪಮಾಲಂಕಾರ

೧. ಉಪಮೇಯ : ಹುಲಿ

೨. ಉಪಮಾನ : ಬೆಕ್ಕು

೩. ಉಪಮವಾಚಕ : ಅಂತೆ

೪. ಸಮಾನಧರ್ಮ : ಹುದುಗಿಸಿಕೊಳ್ಳು

**ಸಮನ್ವಯ** : ಇಲ್ಲಿ ಉಪಮೇಯವಾದ ಹುಲಿಯ ದೇಹವನ್ನು ಉಪಮಾನವಾದ ಬೆಕ್ಕಿಗೆ ಹೋಲಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.

**ಲಕ್ಷಣ :** ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

**9.ವದನಾರವಿಂದ . – ರೂಪಕಾಲಂಕಾರ**

೧. ಉಪಮೇಯ : ವದನ

೨. ಉಪಮಾನ : ಅರವಿಂದ

**ಸಮನ್ವಯ** : ಇಲ್ಲಿ ಉಪಮೇಯವಾದ ಶಾನುಭೋಗರ ವದನ(ಮುಖ)ವನ್ನು ಉಪಮಾನವಾದ ಅರವಿಂದ(ಕಮಲ)ಕ್ಕೆ ಅಭೇದವಾಗಿ ರೂಪಿಸಿರುವುದರಿಂದ ಇದು ರೂಪಕಾಲಂಕಾರವಾಗಿದೆ.

**ಲಕ್ಷಣ** : ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರೆಡೂ ಒಂದೇ ಎಂದು ವರ್ಣಿಸಿದರೆ ಅದೇ ರೂಪಕಾಲಂಕಾರ.

**10. ಮಾತು ಬಲ್ಲವನಿಗೆ ಜಗಳವಿಲ್ಲ ; ಊಟ ಬಲ್ಲವನಿಗೆ ರೋಗವಿಲ್ಲ.–ದೃಷ್ಟಾಂತಾಲಂಕಾರ**

೧. ಉಪಮೇಯ : ಮಾತು ಬಲ್ಲವನಿಗೆ ಜಗಳವಿಲ್ಲ

೨. ಉಪಮಾನ : ಊಟ ಬಲ್ಲವನಿಗೆ ರೋಗವಿಲ್ಲ.

**ಸಮನ್ವಯ** : ಇಲ್ಲಿ ಉಪಮೇಯವಾದ ಮಾತು ಬಲ್ಲವನಿಗೆ ಜಗಳವಿಲ್ಲ ಹಾಗೂ ಉಪಮಾನವಾದ ಊಟ ಬಲ್ಲವನಿಗೆ ರೋಗವಿಲ್ಲ ಎರಡೂ ಬಿಂಬ– ಪ್ರತಿಬಿಂಬದಂತೆ ಇರುವುದರಿಂದ ಇಬ್ಬರೂ ಒಂದೇ ಎಂಬುದು ಪ್ರತಿಪಾದಿತವಾಗಿದೆ.ಆದ್ದರಿಂದ ಇದು ದೃಷ್ಟಾಂತಾಲಂಕಾರವಾಗಿದೆ

**ಲಕ್ಷಣ** : ಎರಡು ಬೇರೆ ಬೇರೆ ವಾಕ್ಯಗಳಲ್ಲಿ ಅರ್ಥಸಾದೃಶ್ಯದಿಂದ ಬಿಂಬ– ಪ್ರತಿಬಿಂಬ ಭಾವವು ತೋರಿಬಂದರೆ ಅದನ್ನು ದೃಷ್ಟಾಂತಾಲಂಕಾರ ಎನ್ನುವರು.

**11.ಅಚ್ಛೋದ ಸರೋವರವು ತ್ರೈಲೋಕ್ಯ ಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು. – ಉತ್ಪ್ರೇಕ್ಷಾಲಂಕಾರ**

೧. ಉಪಮೇಯ : ಅಚ್ಛೋದ ಸರೋವರ

೨. ಉಪಮಾನ : ರನ್ನಗನ್ನಡಿ

**ಸಮನ್ವಯ** : ಇಲ್ಲಿ ಉಪಮೇಯವಾದ ಅಚ್ಛೋದ ಸರೋವರವನ್ನು ಉಪಮಾನವಾದ ರನ್ನಗನ್ನಡಿ ಎಂಬುದಾಗಿ ಕಲ್ಪಿಸಿರುವುದರಿಂದ ಇದು ಉತ್ಪ್ರೇಕ್ಷಾಲಂಕಾರ ವಾಗಿದೆ.

**ಲಕ್ಷಣ** : ಉಪಮೇಯವಾದ ವಸ್ತುವನ್ನು ಅಥವಾ ಸನ್ನಿವೇಶವನ್ನು ಉಪಮಾನದ ವಸ್ತುವನ್ನಾಗಿ ಅಥವಾ ಸನ್ನಿವೇಶವನ್ನಾಗಿ ಕಲ್ಪಿಸುವುದೇ ಉತ್ಪ್ರೇಕ್ಷಾಲಂಕಾರ.

**12. ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ. – ಉಪಮಾಲಂಕಾರ**

೧. ಉಪಮೇಯ : ನೀಚರಿಗೆ ಮಾಡಿದ ಉಪಕಾರ

೨. ಉಪಮಾನ : ಹಾವಿಗೆ ಎರೆದ ಹಾಲು

೩. ಉಪಮವಾಚಕ : ಅಂತೆ

೪. ಸಮಾನಧರ್ಮ : ನಿಷ್ಪ್ರಯೋಜಕವಾದುದು.

**ಸಮನ್ವಯ** : ಇಲ್ಲಿ ಉಪಮೇಯವಾದ ನೀಚರಿಗೆ ಮಾಡಿದ ಉಪಕಾರವನ್ನು ಉಪಮಾನವಾದ ಹಾವಿಗೆ ಎರೆದ ಹಾಲಿಗೆ ಹೋಲಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.

**ಲಕ್ಷಣ** : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

**13. ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು. – ಉಪಮಾಲಂಕಾರ**

೧. ಉಪಮೇಯ : ಭೀಮ ದುರ್ಯೋಧನರು

೨. ಉಪಮಾನ : ಮದಗಜಗಳು

೩. ಉಪಮವಾಚಕ : ಅಂತೆ

೪. ಸಮಾನಧರ್ಮ : ಹೋರಾಡು

**ಸಮನ್ವಯ** : ಇಲ್ಲಿ ಉಪಮೇಯವಾದ ಭೀಮ ದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಹೋಲಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.

**ಲಕ್ಷಣ** : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

**14. ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ. – ರೂಪಕಾಲಂಕಾರ**

೧. ಉಪಮೇಯ : ಒಡಲಬೇಗೆ

೨. ಉಪಮಾನ : ಬೆಂಕಿಯುರಿ

**ಸಮನ್ವಯ :** ಇಲ್ಲಿ ಉಪಮೇಯವಾದ ಅಯೋಧ್ಯೆಯ ಪ್ರಜೆಗಳ ಒಡಲಬೇಗೆಯನ್ನು ಉಪಮಾನವಾದ ಬೆಂಕಿಯುರಿಗೆ ಅಭೇದವಾಗಿ ರೂಪಿಸಿರುವುದರಿಂದ ಇದು ರೂಪಕಾಲಂಕಾರವಾಗಿದೆ.

**ಲಕ್ಷಣ :** ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರೆಡೂ ಒಂದೇ ಎಂದು ವರ್ಣಿಸಿದರೆ ಅದೇ ರೂಪಕಾಲಂಕಾರ.

**15. ಖಳನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂದಳವು.**

೧. ಉಪಮೇಯ : ದ್ರುಪದನ ಯೋಗ್ಯತೆ

೨. ಉಪಮಾನ : ತಿಪ್ಪೆಯೇ ಶ್ರೇಷ್ಟ ಎಂದು ಭಾವಿಸುವ ನೊಣದ ಯೋಗ್ಯತೆ

೩. ಉಪಮವಾಚಕ : ಎಂಬವೋಲ್

೪. ಸಮಾನಧರ್ಮ : ಲುಪ್ತವಾಗಿದೆ

**ಸಮನ್ವಯ** : ಇಲ್ಲಿ ಉಪಮೇಯವಾದ ದ್ರುಪದನ ಯೋಗ್ಯತೆಯನ್ನು ಉಪಮಾನವಾದ ನೊಣದ ಯೋಗ್ಯತೆಗೆ ಹೋಲಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.

**ಲಕ್ಷಣ** : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.